


# ಕುಂತಿಯ ಹಿತ್ತಲು



ವಾಸುದೇವ ನಾಡಿಗ್

ಕಲೆ: ಎಸ್.ವಿ. ಹೂಗಾರ್



ಮಲ್ಲಿಗೆ ದವನದ ಪರಿಮಳ ಹೊದ್ದ ಗಾಳಿ
ಬಾವಿನೀರ ತುಂಬಾ ಇರುಳ ಶಶಿ ಈಜಿದ ತರಂಗ
ತುಳಸಿ ಬೃಂದಾವನದ ಗೂಡಲ್ಲಿ
ಬೆಳಕಿಗಾಗಿ ಹಾತೊರೆದ ಹಣತೆ
ಕುಂತಿ ಬೆರಳಿಗೆ ಕಾದ ರಂಗವಲ್ಲಿ ಪುಡಿ
ಪುಟ್ಟ ಮಕ್ಕಳು ಎಸೆದ ಚೆಂಡು ಗಿಲ್ಲಿ ದಾಂಡು ಚೌಕಾಬಾರದ ಮಸುಕು ಗೆರೆ
ಬಾಗಿದ ಗರಿಕೆಯ ಮೇಲೆ ಪಾದಗಳ ಭಾರ

ಕುಂತಿ ಕೂಗುತ್ತಲೇ ಇದ್ದಳು
‘ಮಕ್ಕಳೇ ಹಿತ್ತಲಲ್ಲೇ ಆಡಿಕೊಳ್ಳಿ
ಮುಂದಂಗಳಕ್ಕೆ ಬರಬೇಡಿ
ರಥಗಳೋಡುತ್ತಿರುತ್ತವೆ, ಖುರಪುಟ ಹೊಸಕಿ ಹಾಕುತ್ತದೆ
ಆನೆಗಳ ಮದೋನ್ಮಾದ, ಹುಚ್ಚು ಸೈನಿಕರ ವೀರಾವೇಶ
ಅಣತಿ ನೀಡಿದಲ್ಲಿ ರಣಕಹಳೆ ರಕ್ತದ ಕೋಡಿ
ಕಣ್ಣಾಲಿಗಳಲ್ಲಿ ಒಣಗಿದ ನೀರು
ಎದೆಯಲ್ಲಿ ನಿರ್ಭಾವುಕ ಸದ್ದು
ಬರಬೇಡಿ ಮಕ್ಕಳೇ ಹಿತ್ತಲಲ್ಲೇ ಆಡಿ’

ಕುಂತಿಯ ಹಿತ್ತಲೇ ಹೀಗೆ
ಕೈತುತ್ತಿನ ಅಕ್ಷಯದಂತಃಕರಣದ ಬಟ್ಟಲು
ಕಣ್ಣ ರೆಪ್ಪೆಯ ಕಾವಲು, ಹಸಿರು ತೊಟ್ಟಿಲು
ಹೊನ್ನಿನ ವಾಂಛೆ ತೊರೆದ ವಾತ್ಸಲ್ಯದ ತವರು
ಕರ್ಣನೂ ಇರಬೇಕಿತ್ತು ಇಲ್ಲಿ ಎನ್ನುವ ಖಾಲಿ ಜಾಗ
ಅವಳ ಹಿತ್ತಿಲು ಎಂದರೆ ಕರುಳ ನೆರಳು
ಮಕ್ಕಳ ಕಣ್ಗಾವಲು,
‘ಮಕ್ಕಳೇ ಮುಂಬಾಗಿಲೊಳಗೇ ನಿಲ್ಲಿ’ ಎಂಬ ಉಲಿ

ಮಕ್ಕಳಿಗೆ
ಆಟಕ್ಕೆ ಹಿತ್ತಲು ಸಾಲದಾಯಿತು
ದುರ್ಯೋಧನ, ದುಶ್ಯಾಸನ, ದ್ರೋಣರ ಶಾಲೆ, ಸ್ವಯಂವರದ ರುಚಿ
ನಡುಮನೆಯ ಪಗಡೆಯ ಹಾಸು,
ಮುಂದಿನದೆಲ್ಲ ಬರೀ ಬಯಲು
ಹಿತ್ತಲನ್ನು ಮರೆತ ಬಯಲು.

ಈಗ ಕುಂತಿಯ ಹಿತ್ತಲಲ್ಲಿ ನೆನಪುಗಳ ಮುಳ್ಳು ಕುರುಚಲು